O.S.No. 9/2019 DW-2

ದಿನಾಂಕ :05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ಶ್ರೀ **PBP** ವಕೀಲರಿಂದ **:-**

ದಾವಾ ಆಸ್ತಿಯ ಸರ್ವೆ ನಂ.285 ಇರುತ್ತದೆ. ದಾವಾ ಆಸ್ತಿಯು ಮೊದಲು ಪ್ರತಿವಾದಿಯ ಅಣ್ಣನ ಹೆಸನರಿಲ್ಲಿ ಇತ್ತು. 1 ನೇ ಪ್ರತಿವಾದಿಗೆ ಆಸ್ತಿಯು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲಾ. 1 ನೇ ಪ್ರತಿವಾದಿಗೆ ಆಸ್ತಿಯು ಹೇಗೆ ಬಂತು ಎಂಬುವುದರ ಕುರಿತು ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಪ್ರತಿವಾದಿ ಮತ್ತು ಅವರ ಅಣ್ಣ ಇಬ್ಬರು ಸೇರಿ ದಾವಾ ಆಸ್ತಿಯನ್ನು ಖರೀದಿಗೆ ಪಡೆಯಲು ಪ್ರಸ್ತಾವನೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಭೂಮಿಯನ್ನು ಎಷ್ಟು ಮೊತ್ತಕ್ಕೆ ಪಡೆದೆವು ಎಂಬುವುದು ನನ್ನ ತಂದೆಗೆ ಗೊತ್ತಿರುತ್ತದೆ.

ಸದರಿ ವ್ಯವಹಾರ ಮಾಡುವ ಸಮಯದಲ್ಲಿ 1 ನೇ ಪ್ರತಿವಾದಿಯ 5-ಜನ ಅಣ್ಣ-ತಮ್ಮಂದಿರು ಹಾಜರು ಇದ್ದರು. ಖರೀದಿ ವ್ಯವಹಾರದ ದಾಖಲಾತಿಗಳನ್ನು ಸೋಲಾಪೂರದಲ್ಲಿ ತಯ್ಯಾರಿಸಿರುತ್ತೇವೆ. ಖರೀದಿ ಪತ್ರದಲ್ಲಿ 5-ಜನ ಅಣ್ಣ-ತಮ್ಮಂದಿರು ಸಹಿ ಮಾಡಿರುತ್ತಾರೆ. 1 ನೇ ಪ್ರತಿವಾದಿಯ ಅಣ್ಣ-ತಮ್ಮಂದಿರ ಹೆಸರುಃ ಬಾಬು, ಬಾಶಾ, ಇಸ್ಮಾಯಿಲ್, ಇಮಾಮ, ಸತಾರ್ ಅಂತಾ ಇರುತ್ತದೆ. ಬಾಬು, ಬಾಶಾ, ಇಸ್ಮಾಯಿಲ್ ಮತ್ತು ಸತಾರ್ ಇವರುಗಳು ತೀರಿಕೊಂಡಿರುತ್ತಾರೆ ಎಂದರೆ ಸರಿ. ಬಾಬು ತೀರಿಕೊಂಡು ಎಷ್ಟು ವರ್ಷ ಆಯಿತು ಎಂದು ನನಗೆ ಗೊತ್ತಿಲ್ಲಾ. ಖರೀದಿ ಮಾಡುವ ಸಮಯದಲ್ಲಿ ಬಾಬು, ಬಾಶಾ ಮತ್ತು ಸತಾರ್ ಇವರುಗಳು ತೀರಿಕೊಂಡಿದ್ದರು ಎಂದರೆ ಸರಿ. ಖರೀದಿ ಮಾಡುವ ಸಮಯದಲ್ಲಿ ವಾದಿ ಮತ್ತು ವಾದಿಯ ಗಂಡ ಬಂದಿರುತ್ತಾರೆ. ಖರೀದಿ ಸಮಯದಲ್ಲಿ ಹೆಣ್ಣು ಮಕ್ಕಳ ಸಹಿ ಪಡೆದಿಲ್ಲಾ ಆದರೆ ಎಲ್ಲಾ ಗಂಡಸರ ಸಹಿ ಪಡೆದಿರುತ್ತೇವೆ.

ಸದರಿ ದಾವಾ ಆಸ್ತಿಯು ವಾದಿಯ ಗಂಡನ ಅಣ್ಣ-ತಮ್ಮಂದಿರಲ್ಲಿ ಆದ ಪಾಲು ವಾಟ್ನಿಯಲ್ಲಿ ವಾದಿಯ ಗಂಡನಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ವಾದಿಯ ಗಂಡ ಬಹಳ ವರ್ಷಗಳಿಂದ ಸೋಲಾಪೂರದಲ್ಲಿ ಇದ್ದರು ಎಂದರೆ ಸರಿ. ವಾದಿಯ ಗಂಡ 1 ನೇ ಪ್ರತಿವಾದಿಗೆ ಕೇವಲ ಭೂಮಿ ಉಳಿಮೆ ಮಾಡಲು ನೀಡಿದ್ದ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದರಿಂದ ಕಾಲಾವಾಕಾಶ ನೀಡಿ, ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ

ದಿನಾಂಕ :05.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ- ವಾದಿ ಪರ ಶ್ರೀ **PBP** ವಕೀಲರಿಂದ **:-**</u>

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಸಂಗತಿ ಗೊತ್ತಿರುತ್ತವೆ. ದಾವಾ ಆಸ್ತಿಯ ಸಂಖ್ಯೆ ನನಗೆ ಹೇಳಲು ಬರುವುದಿಲ್ಲಾ, ಕಾರಣ ನಾನು ಶಾಲೆ ಕಲಿತ್ತಿಲ್ಲಾ. ನನ್ನ ಹೊಲದ ಸರ್ವೆ ನಂ.85 ಇರುತ್ತದೆ. ನನ್ನ ಹೆಸರಿಗೆ 03 ಎಕರೆ ಜಮೀನು ಮತ್ತು ನನ್ನ ತಮ್ಮ ಹೆಸನರಿಲ್ಲಿ ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲಾ. ನನ್ನ ಹೆಸರಿಗೆ 03 ಎಕರೆ ಜಮೀನು ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನನಗೆ ಜಮೀನ ಚೆಕ್ ಬಂದಿ ಹೇಳಲು ಬರುವುದಿಲ್ಲಾ.

ಪ್ರತಿವಾದಿಯರು ನಮ್ಮ ದೂರಿನ ಅಣ್ಣ-ತಮ್ಮಂದಿರು ಇರುತ್ತಾರೆ. ದೂರಿನ ಅಣ್ಣ-ತಮ್ಮಂದಿರು ಎಂದರೆ ನನ್ನ ಅಜ್ಜನ ಅಣ್ಣ-ತಮ್ಮಂದಿರು ಇರಬಹುದು. ನಾನು ಹಕ್ಕು ಬಿಟ್ಟ ಪತ್ರವನ್ನು ನಾನು ಎಲ್ಲಿ ಮಾಡಿಕೊಂಡಿರುತ್ತೇವೆ ನನಗೆ ಗೊತ್ತಿಲ್ಲಾ. ಸಾಕ್ಷಿಯು ಮುಂದುವರೆದು ನಮ್ಮ ಅಣ್ಣನಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.1 ರವರಿಗೆ ಜಮೀನು ಹೇಗೆ ಬಂದು ನನಗೆ ಗೊತ್ತಿಲ್ಲಾ. ಸದರಿ ದಾವಾ ಆಸ್ತಿಯು 1 ನೇ ಪ್ರತಿವಾದಿಕ್ಕಿಂತ ಮೊದಲು 1 ನೇ ವಾದಿಯ ಗಂಡನ ಹೆಸನರಿಲ್ಲಿ ಇತ್ತು ಎಂದರೆ ಸರಿ. 1 ನೇ ವಾದಿಯು ಗಂಡ ನಮಗೆ ದೂರಿನ ಅಣ್ಣ-ತಮ್ಮಂದಿರು ಆಗಬೇಕು. ಪ್ರತಿವಾದಿ ಮತ್ತು 1 ನೇ ವಾದಿಯ ಗಂಡ ಇಸ್ಮಾಯಿಸಾಬ ಅಣ್ಣ-ತಮ್ಮಂದಿರು ಎಂದರೆ ಸರಿ. ಸುಮಾರು 20-30 ವರ್ಷಗಳ ಹಿಂದೆ ಇಸ್ಮಾಯಿಸಾಬ ರವರ ಹೆಸರಿಗೆ ದಾವಾ ಆಸ್ತಿ ಇತ್ತು ಎಂದರೆ ಸಾಕ್ಷಿಯು ಇಮಾಮಸಾಬ ರವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

ನಮ್ಮ ಹೆಸರಿಗೆ ಆಸ್ತಿ ಮಾಡಿಕೊಳ್ಳುವ ಸಮಯದಲ್ಲಿ ಇಸ್ಮಾಯಿಲಸಾಬ ರವರು ಜೀವಂತ ಇದ್ದರು. ದಾವಾ ಆಸ್ತಿಯು ಇಸ್ಮಾಯಿಲಸಾಬ ಇದ್ದು ಆತನು ಪ್ರತಿವಾದಿ ನಂ.1 ರವರಿಗೆ ಉಳಿಮೆ ಮಾಡಲು ಮಾತ್ರ ನೀಡಿರುತ್ತಾನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಖೊಟ್ಟಿ ದಾಖಲಾತಿಗಳನ್ನು ಸೃಷ್ಟಿಸಿ ನಿಮಗೆ ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಹಕ್ಕು ಬಿಟ್ಟ ಪತ್ರ ಮಾಡುವ ಸಮಯದಲ್ಲಿ ಬಾಶಾ ಧರೇವಾಡಿ ಹವಲ್ದಾರ ಎನ್ನುವ ನಮ್ಮ ಕಾಕ ಸಾಕ್ಷಿ ಆಗಿದ್ದರು. ಸದರಿಯವರು ಹಕ್ಕು ಬಿಟ್ಟ ಪತ್ರ ಸಹಿ ಮಾಡಿದ್ದಾರೋ ಇಲ್ಲವೋ ವಿಷಯ ನನಗೆ ಗೊತ್ತಿಲ್ಲ. ದಾವಾ ಆಸ್ತಿಗು ಮತ್ತು ನಮಗೂ ಯಾವುದೇ ಸಂಬಂಧ ಇರದೇ ಇದ್ದರು ಸಹಾ ಖೊಟ್ಟಿ ಹಕ್ಕು ಬಿಟ್ಟುಕೊಟ್ಟ ಪತ್ರ ತಯ್ಯಾರಿಸಿ ದಾವಾ ಆಸ್ತಿ ನಮದೇ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ